**ಸಾಕ್ಷಿಯನ್ನು ದಿಃ 18.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳು ನಮ್ಮ ಆಸ್ಪತ್ರೆಗೆ ಬರುವ ಮೊದಲು ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಮಿಮ್ಸ್ ಆಸ್ಪತ್ರೆಯಲ್ಲಿ ಎಷ್ಟು ದಿನ ಮತ್ತು ಯಾತಕ್ಕಾಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಮ್ಮ ಆಸ್ಪತ್ರೆಗೆ ಗಾಯಾಳು ದಿಃ 08.06.2023 ರಂದು ದಾಖಲಾಗಿರುತ್ತಾರೆ. ಗಾಯಾದ ಹಿನ್ನಲೆಯನ್ನು ಗಾಯಾಳು ಹೇಳಿಕೆಯ ಮೇರೆಗೆ ಆಸ್ಪತ್ರೆಯ ದಾಖಲೆಯಲ್ಲಿ ಬರೆದಿರುತ್ತಾರೆ ಅದನ್ನು ನಾನು ಪ್ರಮಾಣ ಪತ್ರದಲ್ಲಿ ದೃಢೀಕರಿಸುವುದಿಲ್ಲ. ಗಾಯಾಳುವಿನ ಸ್ಪೆನ್ ಗೆ ಸಂಬಂಧಿಸಿದಂತೆ ನಾನೊಬ್ಬನೆ ಚಿಕಿತ್ಸೆ ನೀಡಿರುತ್ತೇನೆ. ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾದಾಗ ಮತ್ತು ಬಿಡುಗಡೆಯಾದಾಗ ಅವರ ಜಿ.ಸಿ.ಎಸ್ ಸ್ಕೋರ್ 15/15 ಇತ್ತು. ಜಿ.ಸಿ.ಎಸ್ ಸ್ಕೋರ್ ನಲ್ಲಿ ಯಾವುದೇ ವೆತ್ಯಾಸ ಇರುವುದಿಲ್ಲ. ಗಾಯಾಳು ಯಾವುದೇ ಆಸರೆ ಇಲ್ಲದೇ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಗಾಯಾಳುವಿಗೆ ಸ್ಪೈನ್ ಇಂಜ್ಯೂರಿ ಆಗಿದ್ದು ಅದಕ್ಕೆ ಚಿಕಿತ್ಸೆ ನೀಡಿರುತ್ತೇನೆ. ಗಾಯಾಳುವಿಗೆ ಸ್ಪೈನ್ ಇಂಜ್ಯೂರಿ ಹೊರತು ಪಡಿಸಿ ತಲೆಗೆ ಬ್ರೈನ್ ಇಂಜ್ಯೂರಿ ಆಗಿರುವುದಿಲ್ಲ. ನಾನು ಗಾಯಾಳುವಿಗೆ ಒಳ್ಳೆಯ ಚಿಕಿತ್ಸೆ ನೀಡಿರುತ್ತೇನೆ ಎಂದರೆ ಸರಿ. ಆ ಕಾರಣಕ್ಕಾಗಿ ಗಾಯಾಳು ಗುಣಮುಖರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗಾಯಾಳು ಮುಂದುವರೆದ ಚಿಕಿತ್ಸೆಗೆ 5–6 ಬಾರಿ ಬಂದಿರುತ್ತಾರೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಗಾಯಾಳು ಕೊನೆಯಬಾರಿ ದಿಃ 20.09.2024 ರಂದು ಪರೀಕ್ಷಿಸಿರುತ್ತೇನೆ. ಅದಕ್ಕೂ ಮೊದಲು ದಿಃ 10.08.2024 ರಂದು ಬಂದಿರುತ್ತಾರೆ. ಕೊನೆಯ ಬಾರಿ ಗಾಯಾಳು ಬಂದಾಗ ನ್ಯೂನತೆ ಪರಿಗಣಿಸಿರುತ್ತೇನೆ ಎಂದರೆ ಸರಿ. ಆ ದಿನ ಗಾಯಾಳು ನ್ಯೂನತೆ ಪರಿಗಣಿಸಿಕೊಳ್ಳಲು ಮಾತ್ರ ಬಂದಿರುತ್ತಾರೆ ಎಂದರೆ ಸರಿಯಲ್ಲ. ನ್ಯೂನತೆಯನ್ನು 2018 ರ ಗೆಜೆಟ್ ನೋಟೀಫಿಕೇಶನ್ ಪ್ರಕಾರ ಮಾಡಿರುತ್ತೇನೆ. 2024 ರ

ಗೆಜೆಟ್ ನೋಟೀಫಿಕೇಶನ್ ಪ್ರಕಾರ ನ್ಯೂನತೆ ಪರಿಗಣಿಸಿರುವುದಿಲ್ಲ. 43.3% ನ್ಯೂನತೆಯನ್ನು ಎಂ.ಆರ್.ಐ ಸ್ಕ್ಯಾನ್, ಕ್ಲಿನಿಕಲ್ ಎಕ್ಸಾಮಿನೇಷನ್ ಆಧಾರದ ಮೇಲೆ ಪರಿಗಣಿಸಿರುತ್ತೇನೆ. ಕ್ಲಿನಿಕಲ್ ಎಕ್ಸಾಮಿನೇಷನ್ ಬಗ್ಗೆ ಹೊರರೋಗಿ ದಾಖಲೆಯಲ್ಲಿ ನಮೂದು ಮಾಡಿರುತ್ತೇನೆ. ಆ ಬಗ್ಗೆ ಹೊರರೋಗಿ ದಾಖಲೆಯಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತ್ಯೇಕ ನ್ಯೂನತಾ ಪ್ರಮಾಣ ಪತ್ರ ನೀಡಿರುವುದಿಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವುದು ಅಸೆಸ್ಮೆಂಟ್ ನ್ಯೂನತಾ ಪ್ರಮಾಣ ಪತ್ರ ಅಲ್ಲ ಎಂದರೆ ಸರಿ. ಗಾಯಾಳು ನ್ಯೂನತೆ ಪರಿಗಣಿಸಿಕೊಳ್ಳಲು ಮೆಡಿಕಲ್ ಬೋರ್ಡ್ ಗೆ ಹೋಗಬಹುದಿತ್ತು ಎಂದರೆ ಸರಿ. ಗಾಯಾಳುವಿಗೆ ಯಾವುದೇ ನ್ಯೂನತೆ ಇಲ್ಲದಿದ್ದರೂ ನಾನು ಉತ್ಪ್ರೇಕ್ಷಣೆಯಿಂದ ನ್ಯೂನತೆ ನೀಡುತ್ತೇನೆ ಎನ್ನುವ ಕಾರಣಕ್ಕೆ ನನ್ನ ಬಳಿ ಬಂದು ನ್ಯೂನತೆ ಪರಿಗಣಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನ್ಯೂನತೆಯು ಗೈಡ್ ಲೈನ್ ಪ್ರಕಾರ ಪರಿಗಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.